ಸಾಹೇಬರು ಬರುವುದಕ್ಕಿಂತ ಮುಂಚೆಯೇ ಆಫೀಸಿನ ಕಸವನ್ನೆಲ್ಲಾ ಅಚ್ಚುಕಟ್ಟಾಗಿ ಗುಡಿಸಿಬಿಡಬೇಕು ಎಂದುಕೊಂಡ ಮಾದ ಕಿತ್ತುಹೋದ ಬೆಲ್ಟಿಗೆ ರಬ್ಬರ್ ಬ್ಯಾಂಡ್ ಹಾಕಿ ವಾಚಿನಲ್ಲಿ ಸಮಯ ನೋಡಿಕೊಂಡ. ಆಗಲೇ ಹತ್ತು ಗಂಟೆಯಾಗಿತ್ತು. ಸ್ಟೋರ್ ರೂಮಿನತ್ತ ಸರಸರನೆ ನಡೆದು ಅಲ್ಲಿ ಮುರಿದ ಖುರ್ಚಿ, ಮೇಜು ಇನ್ನಿತರ ಕೆಲಸಕ್ಕೆ ಬಾರದ ಆಫೀಸಿನ ಸಲಕರಣೆಗಳ ಜೊತೆಯಲ್ಲಿ ಬಿದ್ದಿದ್ದ ಕಸಪೊರಕೆಯನ್ನು ಎತ್ತಿಕೊಂಡು ಬಂದು ಮೂಲೆಯೊಂದರಿಂದ ಪ್ರಾರಂಭಿಸಿ ಕಸ ಗುಡಿಸಲು ಶುರು ಮಾಡಿದ. ಮೇಜು, ಕುರ್ಚಿಗಳನ್ನು ಅತ್ತ ಇತ್ತ ಸರಿಸಿ ಕಸ ಗುಡಿಸಿ ಅವುಗಳನ್ನು ಮತ್ತೆ ಸ್ವಸ್ಥಾನಕ್ಕೆ ಜರುಗಿಸಿ ಇಟ್ಟು ಕಸವನ್ನು ಮುಂದಕ್ಕೆ ಗುಡಿಸುತ್ತಿದ್ದವನಿಗೆ ಇನ್ನೆಷ್ಟು ದಿನ ಈ ಕೆಲಸ... ಎನ್ನುವುದನ್ನು ನೆನೆದು ಕೆಲಸ ಹೋದರೆ ಮುಂದೇನು ಗತಿ ಎಂಬ ಪ್ರಶ್ನೆ ಎದುರಾಗಿ ಎದೆಯಲ್ಲಿ ಅವ್ಯಕ್ತ ಭೀತಿಯೊಂದು ಇಣುಕಿತು. ಒಡನೆಯೇ ತನ್ನ ಅಪ್ಪ ಹೇಳುತಿದ್ದ ಮಾತುಗಳು ಕಿವಿಯಲ್ಲಿ ಪ್ರತಿಧ್ವನಿಸಿದಂತಾಯಿತು.

'ಲೇ ಮಾದ... ನಿನ್ ಒಳ್ಳೆದುಕ್ಕೇ ಹೇಳ್ತಾ ಇವ್ನಿ, ಜ್ಞಾಪ್ಕ ಇಟ್ಕೊ... ಹಿಂಗೆ ಇಸ್ಕೂಲಿಗೆ ಹೋಗ್ದಂಗೆ ಕದ್ದು ತಿರುಗ್ ಬ್ಯಾಡ. ನಾನಂತೂ ಅಕ್ಷರ ಕಲೀದೆ ಹಾಳಾಗ್ ಹೋದೆ... ನೀನಾರ ನಾಕು ಅಕ್ಷರ ಕಲ್ತು ಉದ್ಧಾರ ಆಗು. ಮುಂದುಕ್ಕೆ ಒಂದು ಕಾಲ ಬತ್ತದೆ... ಅಕ್ಷರ ಕಲ್ತೋರು ಕಲೀದೆ ಇದ್ದೋರ್ನ ಗಿರಿಗಾಟ್ಲೆ ಹಂಗೆ ಆಡುಸ್ತಾರೆ... ಅವ್ರು ಹೇಳ್ದಂಗೆ ಕೇಳ್ಕಂಡು ಆಡ್ದಂಗೆ ಆಡುಸ್ಕಂಡು ಬಿದ್ದಿರ್ಬೇಕಾಯ್ತದೆ...'

ಮಾದನಿಗೆ ಅಂದು ತನ್ನ ಅಪ್ಪನ ಮಾತುಗಳು ಕಿವಿಯ ಮೇಲೆ ಬಿದ್ದಿದ್ದವೇ ಹೊರತು ತಲೆಯ ಒಳಗೆ ಹೋಗಿರಲಿಲ್ಲ. ಅಂಗೂ ಹಿಂಗೂ ಐದನೆಯ ಕ್ಲಾಸಿನವರೆಗೂ ಶಾಲೆಯ ಮೆಟ್ಟಿಲು ತುಳಿದವನಿಗೆ ಮುಂದೆ ನಾಲ್ಕು ಗೋಡೆಗಳ ಮಧ್ಯೆ ಬೆಳಗಿನಿಂದ ಸಂಜೆಯವರೆಗೆ ಕುಳಿತುಕೊಳ್ಳುವುದು ಉಸಿರುಗಟ್ಟಿದಂತಾಗುತಿತ್ತು. 'ಇಸ್ಕೂಲಿಗೋಯ್ತೀನಿ...' ಅಂತ ಹೆಗಲಿಗೆ ಬ್ಯಾಗು ತಗುಲಿಸಿಕೊಂಡು ಬಂದು ಊರಿನ ಹಿಂದಿದ್ದ ಕೆರೆಯ ದಡದಲ್ಲಿ ನೀರಿಗೆ ಕಲ್ಲು ಬೀಸಿಕೊಂಡು ಕುಳಿತಿರುತಿದ್ದ. ಇವನು ಶಾಲೆಗೆ ಹೋಗುತ್ತಿಲ್ಲವೆಂದು ತಿಳಿದ ಅಪ್ಪ 'ಇವನು ಉದ್ಧಾರ ಆಗೋ ಮನ್ಸಾ ಅಲ್ಲ...' ಅಂತ ನಿರ್ಧರಿಸಿ ಗೌಡರ ಮನೆಯಲ್ಲಿ ಕುರಿ ಕಾಯಲು ಹಾಕಿದ್ದ. ಏಳೆಂಟು ವರ್ಷ ಗೌಡರ ಕುರಿಗಳನ್ನು ಕಾಯ್ದ ಮೇಲೆ ಒಂದು ದಿನ ಗೌಡರು ತಮ್ಮ ಮಗನಿಗೆ ಸರ್ಕಾರಿ ಕೆಲಸ ಕೊಡಿಸಲು ಬೇಕಾಗಿದ್ದ ಲಂಚದ ಹಣವನ್ನು ಹೊಂದಿಸಲು ಇದ್ದಬದ್ದ ಕುರಿಗಳನ್ನೆಲ್ಲಾ ಮಾರಿದಾಗ ಮಾದ ನಿರುದ್ಯೋಗಿಯಾಗಿದ್ದ. ಅದಾದ ನಂತರ ತೊರೆಯ ಬಳಿಯಲ್ಲಿ ಮರಳು ತುಂಬಲು ಬರುತಿದ್ದ ಲಾರಿಗಳಿಗೆ ಮರಳು ತುಂಬುವ ಕೆಲಸ ಮಾಡತೊಡಗಿದ. ಆ ಕೆಲಸವೂ ಗಟ್ಟಿಯಾಗಿ ಉಳಿಯಲಿಲ್ಲ. ತೊರೆಯಲ್ಲಿದ್ದ ಮರಳೆಲ್ಲಾ ಎರಡು ಮೂರು ವರ್ಷಗಳಲ್ಲಿ ಖಾಲಿಯಾಗಿ ಲಾರಿಗಳು ಬರುವುದು ನಿಂತುಹೋಯಿತು. ವಿಧಿಯಿಲ್ಲದೆ ಮನೆ ಬಿಟ್ಟು ಊರಿನಿಂದ ಮೂವತ್ತು ಕಿಲೋಮೀಟರ್ ದೂರದಲ್ಲಿದ್ದ ತುಮಕೂರು ಪಟ್ಟಣದ ಹೋಟೆಲೊಂದರಲ್ಲಿ ಮುಸುರೆ ತಿಕ್ಕುವ ಕೆಲಸಕ್ಕೆ ಸೇರಿಕೊಂಡ. ಹೊಟ್ಟೆ ತುಂಬಾ ಊಟದ ಜೊತೆಗೆ ಕೈಗೊಂದಿಷ್ಟು ಸಂಬಳ ಸಿಗುತಿದ್ದರೂ ಮಾದನಿಗ್ಯಾಕೋ ಮಾಡುತಿದ್ದ ಕೆಲಸದಲ್ಲಿ ತೃಪ್ತಿ ಸಿಗದೆ ಮತ್ತೆ ಊರಿಗೆ ವಾಪಸಾಗಿ ಅಪ್ಪನ ಜೊತೆ ಅಲ್ಲಿ ಇಲ್ಲಿ ಕೂಲಿ ಕೆಲಸಕ್ಕೆ ಹೋಗುತಿದ್ದ. ಪಕ್ಕದ ಊರಿನಲ್ಲಿದ್ದ ಸೋದರ ಮಾವನ ಮಗಳು ನಿಂಗಿಯ ಜೊತೆ ಮದುವೆಯೂ ಆಗಿ ವರ್ಷಕ್ಕೊಂದರಂತೆ ಎರಡು ಮಕ್ಕಳು ಸಲೀಸಾಗಿ ಹುಟ್ಟಿದವು.